# ಅಂಬೇಡ್ಕರ್: ದಲಿತರ ಬೆಳಕು!

ಅಂಬೇಡ್ಕರ್ ಹೆಸರನ್ನು ಕೇಳಿದರೆ ದಲಿತರ ಕಣ್ಣುಗಳಲ್ಲಿ ಸ್ವಾಭಿಮಾನದ ಬೆಳಕು ಮೂಡುವುದನ್ನು ಕಾಣಬಹುದು. ಅಂಬೇಡ್ಕರ್‌ರವರಿಗಿಂತ ಪೂರ್ವದಲ್ಲಿ 'ಈ ಪುರಾತನ ಸನಾತನ ಪುಣ್ಯ ಭೂಮಿ'ಯಲ್ಲಿ ದಲಿತರ ಬಗ್ಗೆ ಕಳಕಳಿಯಿಂದ ಮಾತನಾಡಿದವರು, ಧ್ವನಿ ಎತ್ತಿ ಸಾಮಾಜಿಕ ನ್ಯಾಯದ ಬಗ್ಗೆ ಹೋರಾಡಿದವರು ಇಲ್ಲವೆಂದು ಹೇಳಲಾಗದು. ಬುದ್ಧ, ಬಸವ, ಗಾಂಧಿ, ನಾರಾಯಣಗುರು, ಪುಳೆ–ಮುಂತಾದವರು ನಡೆಸಿರುವ ಅಂತ್ಯಜ ಪರವಾದ ಹೋರಾಟದ ಪ್ರಭಾವನ್ನು ನಿರಾಕರಿಸುವುದು ತಪ್ಪು. ಆದರೆ ಅಂಬೇಡ್ಕರ್‌ರವರ ಹೋರಾಟವು ದಲಿತರ ಪರವಾದ ಸ್ವಾಭಿಮಾನದ ಹೋರಾಟವಾಗಿತ್ತು. ಅದು ದಲಿತರನ್ನು ಕೇವಲ ಭ್ರಾತೃತ್ವದ ಮಟ್ಟದಲ್ಲಿ ಇತರೆ ಸವರ್ಣೀಯರ ಜೊತೆ ಬೆಸೆಯುವುದು ಮಾತ್ರವಾಗಿರಲಿಲ್ಲ. ಉದಾರವಾದದ ನೆಲೆಯಿಂದ ಭಾವನಾತ್ಮಕ ಸಂಬಂಧ ಕಲ್ಪಿಸುವುದರಲ್ಲಿ ಯಾವುದೇ ಪರಿವರ್ತನೆ ಸಾಧ್ಯವಿಲ್ಲವೆಂದು ಅವರು ಅರಿತಿದ್ದರು. ಭಾವನಾತ್ಮಕ ಸೋದರ ನೆಲೆಯಲ್ಲಿ ಒಂದುಗೂಡಿಸುವ ಮಾತು ಕೇವಲ ತಾತ್ಕಾಲಿಕವಾದ ತೇಪೆ ಕೆಲಸವೆಂದು ಚರಿತ್ರೆಯ ಅಧ್ಯಯನದಿಂದ ಅರಿತಿದ್ದರು. ತೇಪೆಗಾರಿಕೆ ಮತ್ತೆ ಮತ್ತೆ ಪಸೆದು ಹೋಗುವ ಕ್ರಿಯೆ. ಅಲ್ಲಿ ಬದಲಾವಣೆ ಸಾಧ್ಯವಿಲ್ಲ. ಆಮೂಲಾಗ್ರವಾದ ಬದಲಾವಣೆಯೆಂಬುದು ಅಧಿಕಾರ ಮತ್ತು ಅಕ್ಷರ ಗಳಿಕೆಯಿಂದ ಮಾತ್ರ ಸಾಧ್ಯವೆಂದು ಅಂಬೇಡ್ಕರ್ ಮನಗಂಡಿದ್ದರು. ಅದನ್ನು ಮನಃಪರಿವರ್ತನೆಯೆಂಬ ಜಾದುವಿನಿಂದ ತರಲು ಸಾಧ್ಯವಿಲ್ಲ. ಏಕೆಂದರೆ, ಈ ದೇಶದಲ್ಲಿ ಜಾತಿ ಮೂಲ ಎಷ್ಟು ಆಳವಾಗಿದೆಯೆಂದರೆ– ಅದು ಇಲ್ಲಿ ಜನಿಸಿದ ವ್ಯಕ್ತಿಯ ಜೀವಕಣ ಕಣಗಳಲ್ಲಿ, ವಂಶವಾಹಿಗಳಲ್ಲಿ ತಲ ತಲಾಂತರದಿಂದ ಹರಿದುಬಂದಿರುತ್ತದೆ. ಅದು ಮತ್ತೊಂದು ಪ್ರವೃತ್ತಿಯೆಂಬಂತೆ ಭಾರತೀಯನನ್ನು ಆಡಿಸುತ್ತಿರುತ್ತದೆ. ಜಾತಿ ಎನ್ನುವುದು ಅಂತಸ್ತಿನ, ಗೌರವದ ಸಂಕೇತವಾಗಿ ಕೆಲವರಿಗೆ ಪರಿಗಣಿತವಾದರೆ; ಅವಮಾನದ, ನಿಕೃಷ್ಟದ ಪ್ರತೀಕವಾಗಿ ಕೆಲವರಿಗೆ ನಿರ್ದೇಶಿತವಾಗುತ್ತದೆ.

ಅಂದರೆ ಉದಾರವಾದೀ ನೆಲೆಯ ಮನಃ ಪರಿವರ್ತನೆ ಎಂಬುದು ಅನೇಕ ವೇಳೆ ಡಂಬಾಚಾರದ ಮಾತಾಗುತ್ತದೆ. ಈ ಸತ್ಯವನ್ನು ಡಾ. ಅಂಬೇಡ್ಕರ್ ಚೆನ್ನಾಗಿ ಅರಿತಿದ್ದರು. ನಮ್ಮೊಳಗೆ– ನಮ್ಮ ಸಾಮಾಜಿಕ ಸಂರಚನೆಯಲ್ಲಿರುವ ಈ ಅಸಮಾನತೆ–ಅಸಹ್ಯಕರ ಅಸ್ಪೃಶ್ಯತೆಯನ್ನು ಬುಡಸಹಿತ ಕಿತ್ತುಹಾಕಲು ದಲಿತರಿಗೆ ಪ್ರಜ್ಞೆ ಬಂದರೆ ಮಾತ್ರ ಸಾಧ್ಯ ಎಂದು ಮನಗಂಡರು. ದಲಿತರಿಗೆ ತಮ್ಮ ಇರುವಿಕೆಯ ವಸ್ತುಸ್ಥಿತಿಗೆ ಇರುವ ಚಾರಿತ್ರಿಕ ಕಾರಣಗಳೇನು? ಅದಕ್ಕೆ ಯಾರು ಎಷ್ಟು ಹೊಣೆಗಾರರು? ಚರಿತ್ರೆಯ ಲೆಕ್ಕ ಚುಕ್ತವಾಗಬೇಕಾದರೆ ಕೇವಲ ಬೇಡುವುದರಿಂದ ಸಾಧ್ಯವಾಗುವುದಿಲ್ಲ. ಬೇಡುವ ನೆಲೆಯ ಚಲನೆ– ಸ್ಥಿತ್ಯಂತರವಾಗದೆ, ಇತಿಹಾಸ ಚಕ್ರದ ಆರೆಕಾಲು ಪಲ್ಲಟವಾಗದೆ ಸಮಾನತೆ ಬರಲಾಗದು. ಅದಕ್ಕೆ ದಲಿತರು ಅಕ್ಷರಸ್ಥರಾಗಬೇಕು, ಸಂಘಟಿತರಾಗಿ ಹೋರಾಟ ಮಾಡಬೇಕು. ಈ ಹೋರಾಟದ ಮೂಲಕ ಆಳಿಸಿಕೊಳ್ಳುವ ನೆಲೆಯಿಂದ ಆಳುವ ನೆಲೆಗೆ ಜಿಗಿಯಬೇಕು. ಆಳುವ ಹಂತಕ್ಕೆ ಬಂದಾಗ ಮಾತ್ರ ಮೇಲ್ಪದರದ ಶೋಷಣೆಯ ನಿಲುಗಡೆಯಾಗುತ್ತದೆ. ಅಧಿಕಾರ ಮಾತ್ರ ಮರ್ಯಾದೆ ತಂದುಕೊಡುತ್ತದೆ, ಸ್ವಾಭಿಮಾನದ ರಕ್ಷೆ ಮಾಡುತ್ತದೆ; ಅದು ಮಾತ್ರ ಆರ್ಥಿಕ ಸಬಲತೆಯನ್ನು ರೂಪಿಸುತ್ತದೆ ಎಂಬ ಸ್ಪಷ್ಟವಾದ ತಿಳಿವನ್ನು ಹೊಂದಿದ್ದರು. ಅವರಿಗೆ ಈ ತಿಳಿವು ಭಾರತೀಯ ದರ್ಶನ ವೇದಾಂತ ಪುರಾಣಗಳ ಆಳವಾದ ಅಧ್ಯಯನದಿಂದ ಮತ್ತು ಜಾಗತಿಕ ಸಮಾನತಾ ಆಂದೋಲನಗಳ ಗ್ರಹಿಕೆಯಿಂದ ಮೂಡಿತ್ತು. ಆದುದರಿಂದಲೇ ಸೋದರತ್ವದ ಆಧಾರದ, ಮನಃ ಪರಿವರ್ತನಾ ಮೂಲದ ಮಾತುಗಳನ್ನಾಡುತ್ತಿದ್ದ ಗಾಂಧೀಜಿಯವರೊಡನೆ ಅವರಿಗೆ ಕಠಿಣವಾದ ಭಿನ್ನಾಭಿಪ್ರಾಯವಿತ್ತು. ಗಾಂಧೀಜಿಯವರಿಗೆ ದೇಶವನ್ನು ಬ್ರಿಟಿಷರಿಂದ ಬಿಡುಗಡೆಗೊಳಿಸುವ ಹೋರಾಟ ಮುಖ್ಯವಾಗಿ ತೋರಿದರೆ, ಅಂಬೇಡ್ಕರ್‌ರವರಿಗೆ ಬ್ರಿಟಿಷರಿಗಿಂತ ಭಯಾನಕವಾದ ದೇಶೀಯ ಅವಮಾನ ಮತ್ತು ಅಸ್ಪೃಶ್ಯತೆಯಿಂದ ದಲಿತರನ್ನು ಬಿಡುಗಡೆಗೊಳಿಸಬೇಕಿತ್ತು. ಬ್ರಿಟಿಷರು ದೇಶ ತೊರೆಯುವುದರಿಂದ ದೇಶಕ್ಕೆ ಸ್ವಾತಂತ್ರ್ಯ ಬಂದರೂ, ಸವರ್ಣೀಯರಿಂದ ದಲಿತರಿಗೆ ಬಿಡುಗಡೆಯಾಗದೆಂದು ಅವರು ತಿಳಿದಿದ್ದರು. ಅವರ ಈ ತಿಳಿವು ಕಟುವೆನ್ನಿಸಿದರೂ ವಾಸ್ತವ ಸತ್ಯವಾಗಿತ್ತು.

ದಲಿತರಿಗೆ ನಿಜವಾದ ಬೆಳಕು ಬರುವುದು ರಾಜಕೀಯ ಹಕ್ಕುಗಳು ಬಂದಾಗ ಮಾತ್ರ. ಆ ಹಕ್ಕು ಸಂವಿಧಾನದತ್ತವಾಗಿ ಬರಬೇಕು, ಸಹಜವೆಂಬಂತೆ ದೊರಕಬೇಕು. ಚರಿತ್ರೆಯಲ್ಲಿ ಆಗಿರುವ ಸಾಮಾಜಿಕ– ಆರ್ಥಿಕ ಅನ್ಯಾಯ ಅಸಮಾನತೆಗಳನ್ನೂ ತಿದ್ದುವ ಸರಿಪಡಿಸುವ ಕೆಲಸವನ್ನು ಅಂಬೇಡ್ಕರ್ ಸ್ವತಂತ್ರ ಭಾರತದಲ್ಲಿ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಸಮರ್ಪಕವಾಗಿ ನಿರ್ವಹಿಸಿದರು. ಸಹಸ್ರಾರು ವರ್ಷಗಳ ಕಗ್ಗತ್ತಲೆಯಲ್ಲಿ, ಅಸಹ್ಯಕರ ಅಸ್ಪೃಶ್ಯತೆಯ ಅವಮಾನದಲ್ಲಿ ನರಳಿದ್ದ ದಲಿತರಿಗೆ ಧ್ವನಿ ಬಂದಿತು, ಅಧಿಕಾರ ಬಂದಿತು, ಆರ್ಥಿಕ–ಸಾಮಾಜಿಕ ಬಲ ಸಮ್ಮಾನಗಳು ಬಂದವು. ದಲಿತರ ಬದುಕು ಅರಳತೊಡಗಿತು, ಅವರ ಸೃಜನಶೀಲತೆ–ಕ್ರಿಯಾಶೀಲತೆಗಳು ಬೆಳಗತೊಡಗಿದವು. ಕೇವಲ ಅರ್ಧ ಮುಕ್ಕಾಲು ಶತಮಾನದಲ್ಲೇ ದಲಿತರು ಬುದ್ಧಿಮತ್ತೆಯಲ್ಲಾಗಲೀ, ಭಾವ ಕಲ್ಪನೆ ಕಲಾಭಿವ್ಯಕ್ತಿ ಮುಂತಾದ ಪ್ರತಿಭಾಜನ್ಯ ಕ್ರಿಯೆಗಳಲ್ಲಾಗಲೀ ತಾವು ಯಾರಿಗೂ ಎರಡನೆಯವರಲ್ಲ ಎಂದು ತೋರಿಸಿಕೊಟ್ಟಿದ್ದಾರೆ.

ಆದುದರಿಂದಲೇ, ಅಂಬೇಡ್ಕರ್ ಹೆಸರು ಕೇಳಿದರೆ ದಲಿತರ ಕಣ್ಣುಗಳು ಮಿನುಗುತ್ತವೆ.

■ ಶಿಕಾಕು

## ಮಾತೇ ಮುತ್ತು

★ ಹಿಂದೂಗಳ ಧಾರ್ಮಿಕ ಸಾಹಿತ್ಯದ ಬಗ್ಗೆ ನನಗೆ ಭಯ ಭಕ್ತಿಗಳಿಲ್ಲದಿದ್ದರೆ ಅದರಿಂದ ಯಾರೂ ಅಚ್ಚರಿ ಪಡಬಾರದು. ಕಾರಣ ನಾನು ಅಬ್ರಾಹ್ಮಣ. ಅಬ್ರಾಹ್ಮಣನಷ್ಟೇ ಅಲ್ಲ, ಒಬ್ಬ ಅಸ್ಪೃಶ್ಯ ಎಂಬುದನ್ನೂ ನೆನಪಿಟ್ಟುಕೊಳ್ಳಬೇಕು.

–ಬಿ.ಆರ್.ಅಂಬೇಡ್ಕರ್

---

★ ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ ಅದೇ ಶ್ರೇಷ್ಠ ಸರ್ಕಾರ.

–ಲಾರ್ಡ್ ಮೆಕಾಲೆ

---

★ ಯಾವ ಬಗೆಯ ಸರ್ಕಾರ ಎಂಬುದನ್ನು ದಡ್ಡರು ಚರ್ಚಿಸಲಿ; ದಕ್ಷ ಆಡಳಿತ ನಡೆಸುವ ಸರ್ಕಾರವೇ ಶ್ರೇಷ್ಠ ಸರ್ಕಾರ.

–ಅಲೆಕ್ಸಾಂಡರ್ ಪೋಪ್

---

★ ರಾಜಕೀಯದ ಬಗ್ಗೆ ಜಿಗುಪ್ಸೆ ಹುಟ್ಟಿಸುವಂತೆ ಮಾತನಾಡುವವರು ಪ್ರಜಾಪ್ರಭುತ್ವಕ್ಕೆ ಅಪಚಾರ ಎಸಗುತ್ತಾರೆ.

–ಎಲ್.ಕೆ.ಅಡ್ವಾಣಿ

---

★ ಸಹಾಯವನ್ನು ಕೃತಜ್ಞತೆಯಿಂದ ಪಡೆಯುವವನು ಸಾಲದ ಮೊದಲ ಕಂತನ್ನು ಪಾವತಿ ಮಾಡಿದಂತೆಯೇ.

–ಸೆನೆಕ

---

★ ಸ್ವಾತಂತ್ರ್ಯ ಎಲ್ಲ ರಾಷ್ಟ್ರಗಳ ಹಕ್ಕು; ದೇವರ ವರದಾನ. ಅನ್ಯಾಯದ ಹಾದಿ ಹಿಡಿದಾಗ ಅದು 'ವರ'ವಾಗದು.

–ಮಹಾತ್ಮ ಗಾಂಧೀಜಿ

---

★ ಮನುಷ್ಯ ಹುಟ್ಟುವುದು ಸ್ವತಂತ್ರನಾಗಿ, ಆದರೂ ಎಲ್ಲೆಲ್ಲೂ ಬಂಧನದಲ್ಲಿದ್ದಾನೆ.

–ಜೆ.ಜೆ.ರೂಸೋ

---

★ ರಾಜಕೀಯ ಕೊಲೆ, ವಾಕ್ ಸ್ವಾತಂತ್ರ್ಯ ಹರಣದ ಪರಮಾವಧಿ.

–ಜಾರ್ಜ್ ಬರ್ನಾಡ್ ಷಾ

---

★ ಜೀವ ಕೊಟ್ಟ ದೇವರು ಆಗಲೇ ಸ್ವಾತಂತ್ರ್ಯವನ್ನೂ ಕೊಟ್ಟಿದ್ದಾನೆ.

–ಥಾಮಸ್ ಜೆಫರ್‌ಸನ್

---

★ ಮನುಷ್ಯನ ಬೆಳವಣಿಗೆಗೆ ಬೇಕಾದ ಸ್ವಾರ್ಥವು ಅವನಲ್ಲಿರಲೇಬೇಕು. ಆದರೆ ಮಿತಿ ಮೀರಿದ ಸ್ವಾರ್ಥವಿರಕೂಡದು.

–ಶಿವರಾಮ ಕಾರಂತ

---

★ ಯಾರು ತಾನು ಮತ್ತೊಬ್ಬನಿಗೆ ಒಂದು ಕೂದಲಿನ ಎಳೆಯಷ್ಟಾದರೂ ವ್ಯತ್ಯಾಸವೆಂದು ಸಾರುವನೋ, ಅವನು ತಕ್ಷಣ ವ್ಯಥೆಗೆ ಒಳಗಾಗುವನು.

–ಸ್ವಾಮಿ ವಿವೇಕಾನಂದ